ದಿನಾಂಕಃ 21-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಐ.ಎನ್.ಎನ್ ಪ್ರತಿವಾದಿಗಳ ಪರ ವಕೀಲರಿಂದಃ

ನನ್ನ ತಂದೆಗೆ ದಿನಾಂಕ 27.02.1963 ರ ವಿಭಾಗ ಪತ್ರದ ಮೂಲಕ ಬಂದಿತು ಎಂದು ಹೇಳುವ ಆಸ್ತಿಗಳ ಪೈಕಿ ಗುಂಡಾಪುರದ ಸರ್ವೆ ನಂ. 123 ಮತ್ತು ಕುಡುಮಲಕುಂಟೆಯ ಸರ್ವೆ ನಂ. 74/5 ರ ಸ್ವತ್ತುಗಳನ್ನು ಮಾರಾಟ ಮಾಡಲಾಗಿದೆ ಹಾಗೂ ಉಳಿದ ಸ್ವತ್ತುಗಳನ್ನು ಹಾಗೆಯೇ ಉಳಿಸಿಕೊಂಡಿದ್ದೇವೆ. ಸದರಿ ವಿಚಾರವನ್ನು ನಮ್ಮ ವಾದ ಪತ್ರದಲ್ಲಿ ಬರೆಸಿರುವುದಿಲ್ಲ. ಸದರಿ ವಿಚಾರವನ್ನು ವಾದ ಪತ್ರದಲ್ಲಿ ಬರೆಸಲು ತೊಂದರೆ ಇತ್ತೇ? ಎಂಬ ಪ್ರಶ್ನೆಗೆ ಸಾಕ್ಷಿ ಆ ಎರಡು ಸ್ವತ್ತುಗಳನ್ನು ಮಾರಾಟ ಮಾಡಿರುವ ಕಾರಣ ಅವುಗಳ ವಿಚಾರವನ್ನು ತಿಳಿಸುವುದು ಅವಶ್ಯಕತೆ ಇರಲಿಲ್ಲ ಎಂದು ನಮ್ಮ ವಾದ ಪತ್ರದಲ್ಲಿ ಆ ವಿಚಾರ ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ ವಿಭಾಗ ಪತ್ರದ ಮೂಲಕ ಬಂದಿದೆ ಎಂದು ಹೇಳುವ ಆಸ್ತಿಗಳು ಈಗಲೂ ನನ್ನ ತಂದೆಯ ಹೆಸರಿನಲ್ಲಿಯೇ ಇದೆ. ಮಾರಾಟವಾದ ಎರಡು ಸ್ವತ್ತುಗಳನ್ನು ಮಾರಾಟ ಮಾಡಿದ ಸಮಯದಲ್ಲಿ ನಾನು ಮತ್ತು 2 ನೇ ವಾದಿ ಹಾಗೂ ನನ್ನ ಸಹೋದರಿಯರಾದ ವಿಮಲಮ್ಮ ಎಸ್.ಕೆ ಮತ್ತು ಶಶಿಕಲಾ ಎಸ್.ಕೆ ರವರೆಲ್ಲರಿಗೂ 18 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಎರಡು ಸ್ವತ್ತುಗಳನ್ನು ನಿಮ್ಮ ತಂದೆ ಮತ್ತು ಅವರ ಮಕ್ಕಳಾದ ನೀವೆಲ್ಲರೂ ಸೇರಿ ಮಾರಾಟ ಮಾಡಿರುವಿರಿ? ಎಂದರೆ ಸಾಕ್ಷಿ ಗುಂಡಾಪುರದ ಸರ್ವೆ ನಂ. 123 ರ ಸ್ವತ್ತನ್ನು ಮಾರಾಟ ಮಾಡಿಲ್ಲ, ಅದು ಕೆ.ಇ.ಬಿ ಗೆ ಹೋಗಿರುತ್ತದೆ ಹಾಗೂ ಕುಡುಮಲಕುಂಟೆಯ ಸರ್ವೆ ನಂ. 74/5 ರ ಸ್ವತ್ತನ್ನು ಮಾತ್ರ ಮಾರಾಟ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಕೆ.ಇ.ಬಿ ಗೆ ಹೋದ ಸ್ವತ್ತಿಗೆ ಸಂಬಂಧಪಟ್ಟಂತೆ ನನ್ನ ತಂದೆಗೆ ಪರಿಹಾರ ಬಂದಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಪರಿಹಾರವನ್ನು 1 ನೇ ಪ್ರತಿವಾದಿಯು ಸಹ ಪಡೆದುಕೊಂಡರು ಎಂದು ನುಡಿಯುತ್ತಾರೆ.

ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯ ಪಾಲಿಗೆ 27-02-1963 ರ ವಿಭಾಗ ಪತ್ರದ 'ಸಿ' ಷೆಡ್ಯೂಲ್ ಮೂಖಾಂತರ ಬಂದ ಸ್ವತ್ತುಗಳಾಗಿರುತ್ತವೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದ ಸಂಪೂರ್ಣ ಮಾಹಿತಿ ವಾದಿಗಳಾದ ನಮಗೆ ಮತ್ತು ನಮ್ಮ ಸಹೋದರಿಯರಿಗೆ ಇದೆ ಎಂದರೆ ಸರಿಯಲ್ಲ. ವಿಭಾಗ ಪತ್ರದ ಮೂಲಕ ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಪಾಲಿಗೆ ಬಂದಿರುವ ವಿಚಾರ ಗೊತ್ತಿದ್ದರೂ ಅವುಗಳನ್ನು ಲಪಟಾಯಿಸಲು ನನ್ನ ಸಹೋದರಿಯರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರ ನನ್ನ ಸಹೋದರಿಯರಿಗೆ

ಗೊತ್ತಿರುವ ಕಾರಣ ವಾದಿಗಳಾದ ನಮಗೆ ಸಹಾಯ ಮಾಡಲು ನನ್ನ ಸಹೋದರಿಯರು ಈ ದಾವೆಯಲ್ಲಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ವಂಶವೃಕ್ಷದ ಆಧಾರದ ಮೇಲೆ ಈ ಸುಳ್ಳು ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-1ರ ವಂಶವೃಕ್ಷವನ್ನು ನಾನು ಹೇಳಿದಂತೆ ತಯಾರಿಸಲಾಗಿದೆ ಎಂದರೆ ಸರಿ. ತಹಶೀಲ್ದಾರ್ ರವರ ಕಛೇರಿಯಿಂದ ವಂಶವೃಕ್ಷ ದೃಢೀಕರಣ ಪತ್ರವನ್ನು ಪಡೆದರೆ ಸತ್ಯಾಂಶ ಹೊರಬರುತ್ತದೆ ಎಂಬ ಕಾರಣಕ್ಕಾಗಿ ಅದನ್ನು ಪಡೆಯದೆ ನಿಪಿ-1ರ ಸುಳ್ಳು ವಂಶವೃಕ್ಷವನ್ನು ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ.

ವಿಭಾಗ ಪತ್ರದ ಮೂಲಕ ನನ್ನ ತಂದೆಗೆ ಬಂದ 6 ಸ್ವತ್ತುಗಳ ಪೈಕಿ 4 ಸ್ವತ್ತುಗಳಲ್ಲಿ ಇಂದಿಗೂ ನಾನು ಮತ್ತು 2ನೇ ವಾದಿಯೇ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿ. ಸದರಿ ಸ್ವತ್ತುಗಳಲ್ಲಿ ನನ್ನ ಸಹೋದರಿಯರಿಗೂ ಸಮವಾದ ಪಾಲಿದೆ ಎಂದರೆ ಸರಿ. ನಿಮ್ಮ ಸಹೋದರಿಯರನ್ನು ಅಸಲು ದಾವೆ ಸಂಖ್ಯೆ 485/2015 ಮತ್ತು ಈ ದಾವೆಯಲ್ಲಿ ಹೊರಬಿಡಲು ಕಾರಣವೇನು? ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಇಬ್ಬರು ಸಹೋದರಿಯರಿಗೆ ಮದುವೆಯಾಗಿದ್ದು ಅವರ ಪೈಕಿ ಶಶಿಕಲಾರವರು ತೀರಿಕೊಂಡಿದ್ದಾರೆ ಮತ್ತು ವಿಮಲಮ್ಮರವರ ಆಸ್ತಿಗಳಲ್ಲಿ ಭಾಗವನ್ನು ಕೇಳಲಿಲ್ಲ ಎಂದು ನುಡಿಯುತ್ತಾರೆ. ನನ್ನ ಸಹೋದರಿಯರು ನನಗೆ ಮತ್ತು 2ನೇ ವಾದಿಗೆ ಯಾವುದೇ ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ನನ್ನ ಸಹೋದರಿಯಾದ ಶಶಿಕಲಾರವರಿಗೆ ಅಶ್ವಿನಿ ಮತ್ತು ಕೌಶಿಕ್ ಎಂಬ ಹೆಸರಿನ ಇಬ್ಬರು ಮಕ್ಕಳಿದ್ದಾರೆ ಎಂದರೆ ಸರಿ.

ದಿನಾಂಕ 04.01.1978ರ ಮರಣ ಶಾಸನ ಪತ್ರಕ್ಕೆ ಸಂಬಂಧಪಟ್ಟಂತೆ ಈ ದಾವೆಯನ್ನು ಹೂಡಿದ್ದೇವೆ ಎಂದರೆ ಸರಿ. ಸದರಿ ಮರಣ ಶಾಸನ ಪತ್ರವನ್ನು ನಾನು ಓದಿದ್ದೇನೆ ಹಾಗೂ ಅದರಲ್ಲಿರುವ ಅಂಶಗಳನ್ನು ತಿಳಿದುಕೊಂಡಿದ್ದೇನೆ. ದಿನಾಂಕ 27.02.1963ರ ನೋಂದಾಯಿತ ವಿಭಾಗ ಪತ್ರದ ನಂತರ ದಿನಾಂಕ 04.01.1978ರ ಮರಣ ಶಾಸನ ಪತ್ರವನ್ನು 1ನೇ ಪ್ರತಿವಾದಿಯ ತಂದೆ ಬರೆದಿದ್ದಾರೆ ಎಂದರೆ ಸರಿ. ದಾವಾ ಸ್ವತ್ತುಗಳಿಗೂ ಸದರಿ ಮರಣ ಶಾಸನ ಪತ್ರದಲ್ಲಿರುವ ಸ್ವತ್ತುಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮರಣ ಶಾಸನ ಪತ್ರದಲ್ಲಿ ಈ ದಾವೆಯ ಸ್ವತ್ತುಗಳನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-16ರ ಮರಣ ಶಾಸನ ಪತ್ರದಲ್ಲಿ ಈ ದಾವೆಯ ಎರಡು ಸ್ವತ್ತುಗಳು ನಮೂದು ಆಗಿರುವುದಿಲ್ಲ.

ಎಸ್.ಇ ಹನುಮಯ್ಯರವರು ನನ್ನ ತಾತ ಎಂದರೆ ಸರಿ. ನನ್ನ ತಂದೆ ಹೆಸರು ಎಸ್.ಹೆಚ್ ಕೇಶವಯ್ಯ. 1 ನೇ ಪ್ರತಿವಾದಿ ನನ್ನ ಚಿಕ್ಕಪ್ಪ ಹಾಗೂ ಎಸ್.ಹೆಚ್ ಶಾರದಮ್ಮ ನನ್ನ ಅತ್ತೆ ಎಂದರೆ ಸರಿ. ದಿನಾಂಕ 27-02-1963 ರ ವಿಭಾಗ ಪತ್ರದ 'ಎ' ಷೆಡ್ಯೂಲ್ ಮೂಲಕ ಬಂದ ಸ್ವತ್ತುಗಳನ್ನು ಎಸ್.ಇ ಹನುಮಯ್ಯ ಮತ್ತು ಅವರ ಹೆಂಡತಿಯಾದ ಗಂಗಮ್ಮ ಅಲಿಯಾಸ್ ಪಾಪಮ್ಮರವರು ಅವರ 3 ಮಕ್ಕಳಾದ ಎಸ್.ಹೆಚ್ ಕೇಶವಯ್ಯ, ಎಸ್.ಹೆಚ್ ರಾಜಾರಾಮ ಹಾಗೂ ಎಸ್.ಹೆಚ್ ಶಾರದಮ್ಮರವರಿಗೆ ದಿನಾಂಕ 04.01.1978 ರ ಮರಣ ಶಾಸನ ಪತ್ರದ ಮೂಲಕ ಹಂಚಿದರು ಎಂದರೆ ಸರಿಯಲ್ಲ. ಹಳೇ ಆ್ಯಸೆಸಮೆಂಟ್ ನಂ.505 ಹಾಗೂ ಹೊಸ ಆ್ಯಸೆಸಮೆಂಟ್ ನಂ. 531, ಆ್ಯಸೆಸಮೆಂಟ್ ನಂ.536, ಹಾಗೂ ಆ್ಯಸೆಸಮೆಂಟ್ ನಂ.2247 ಬಿ ಮತ್ತು ಸರ್ವೆ ನಂ. 206 ರ 2 ಎಕರೆ 18 ಗುಂಟೆಯ ಪೈಕಿ ಅರ್ಧ ಹಿಸ್ಸೆಯನ್ನು ಎಸ್.ಇ ಹನುಮಯ್ಯರವರು ನನ್ನ ತಂದೆಯಾದ ಎಸ್.ಹೆಚ್ ಕೇಶವಯ್ಯರವರಿಗೆ ಮರಣ ಶಾಸನ ಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸಾಕ್ಷಿ ಹೌದು ಆದರೆ ಅದರ ಬಗ್ಗೆ ನ್ಯಾಯಾಲಯದಲ್ಲಿ ಮತ್ತೊಂದು ದಾವೆಯು ನಡೆಯುತ್ತಿದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳ ಬಗ್ಗೆ ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 289/2012 ರ ದಾವೆಯು ನಡೆಯುತ್ತಿದೆ. ಸದರಿ ದಾವೆಯು ನಡೆಯುತ್ತಿರುವ ವಿಚಾರವನ್ನು ಈ ದಾವೆಯ ವಾದ ಪತ್ರದಲ್ಲಿ ಬರೆಸಿರುವುದಿಲ್ಲ. ಸದರಿ ದಾವೆಯು ಇತ್ಯರ್ಥವಾಗಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ದಾವೆಯ ಅಂತಿಮ ತೀರ್ಪು ನಮ್ಮ ಪರ ಆಗದ ಕಾರಣ ಅದರ ಮೇಲೆ ಮೇಲ್ಮನವಿಯನ್ನು ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ರಾಜಾರಾಮರವರ ಕುಟುಂಬಸ್ಥರು, ಕಾಂತರಾಜ ಮತ್ತು ಕಾವಲಿಗೌಡ ರವರು ಹೂಡಿದ್ದರು. ಸದರಿ ದಾವೆಯ ದೃಢೀಕೃತ ನಕಲುಗಳನ್ನು ಈ ದಾವೆಯಲ್ಲಿ ಹಾಜರುಪಡಿಸಲು ತೊಂದರೆ ಇತ್ತೇ? ಎಂಬ ಪ್ರಶ್ನೆಗೆ ಸಾಕ್ಷಿ ಅದರ ಅವಶ್ಯಕತೆ ಇಲ್ಲದಿದ್ದ ಕಾರಣ ಅದನ್ನು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಮರಣ ಶಾಸನ ಪತ್ರದ ಮೂಲಕ ಬಂದ ಸ್ವತ್ತುಗಳನ್ನು ವಾದಿಗಳಾದ ನಾವು ಹಾಗೆಯೇ ಉಳಿಸಿಕೊಂಡಿರುವ ಕಾರಣ ಸದರಿ ದಾವೆಯ ದೃಢೀಕೃತ ನಕಲನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮರಣ ಶಾಸನ ಪತ್ರದ ಮೂಲಕ ಆ್ಯಸೆಸಮೆಂಟ್ ನಂ. 359/339, ಆ್ಯಸೆಸಮೆಂಟ್ ನಂ. 2247 ಬಿ ಹಾಗೂ ಸರ್ವೆ ನಂ. 206, 63/3 ಮತ್ತು 63/7 ರ ಸ್ವತ್ತುಗಳು 1 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಮರಣ ಶಾಸನ ಪತ್ರದ ಮೂಲಕ ಆ್ಯಸೆಸಮೆಂಟ್ ನಂ. 2247 ಎ, ಸರ್ವೆ ನಂ. 9, 118/3, 114/7 ಹಾಗೂ 2/14 ರ ಸ್ವತ್ತುಗಳು ಎಸ್.ಹೆಚ್ ಶಾರದಮ್ಮರವರಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ಹೌದು ಆದರೆ ಅವುಗಳು

1 ನೇ ಪ್ರತಿವಾದಿಯ ಬಳಿ ಇದೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತುಗಳು 1 ನೇ ಪ್ರತಿವಾದಿಯ ಬಳಿ ಇದೆ ಎಂಬ ಕಾರಣಕ್ಕಾಗಿಯೇ ಈ ದಾವೆ ಮತ್ತು ಮತ್ತೊಂದು ದಾವೆಯನ್ನು ನಾವು ಹೂಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಎಸ್.ಹೆಚ್ ಶಾರದಮ್ಮರವರ ಮಗಳನ್ನು ಮದುವೆಯಾಗಿರುತ್ತಾರೆ ಎಂದರೆ ಸರಿ. ಎಸ್.ಹೆಚ್ ಶಾರದಮ್ಮರವರ ಮಗಳು ಹಾಗೂ 1 ನೇ ಪ್ರತಿವಾದಿಯ ಹೆಂಡತಿಯ ಹೆಸರು ಗಂಗಮ್ಮ ಅಲಿಯಾಸ್ ಗಂಗಲಕ್ಷ್ಮಮ್ಮ. ಸದರಿ ಗಂಗಮ್ಮರವರು ತೀರಿಕೊಂಡಿದ್ದಾರೆ ಎಂದರೆ ಸರಿ. ಎಸ್.ಇ ಹನುಮಯ್ಯರವರು 1984 ರಲ್ಲಿ ತೀರಿಕೊಂಡರು. ಎಸ್.ಇ ಹನುಮಯ್ಯರವರು ತೀರಿಕೊಂಡ ನಂತರ ಅವರ ಹೆಂಡತಿಯಾದ ಗಂಗಮ್ಮ ಅಲಿಯಾಸ್ ಪಾಪಮ್ಮರವರನ್ನು ಯಾರೂ ನೋಡಿಕೊಳ್ಳುತ್ತಿರಲಿಲ್ಲ ಹಾಗೂ ಅವರು ಎರಡು ಆಸ್ತಿಗಳಿಂದ ಬಂದ ಆದಾಯದಿಂದ ಸ್ವಾವಲಂಬಿಯಾಗಿ ಜೀವನ ಸಾಗಿಸುತ್ತಿದ್ದರು ಎಂದರೆ ಸರಿಯಲ್ಲ. ಗಂಗಮ್ಮ ಅಲಿಯಾಸ್ ಪಾಪಮ್ಮರವರು ಉಳಿಸಿಕೊಂಡಿದ್ದ ಎರಡು ಸ್ವತ್ತುಗಳನ್ನು ತನ್ನ ವೈದ್ಯಕೀಯ ಖರ್ಚುಗಳಿಗಾಗಿ ದಿನಾಂಕ 05.04.1997 ರಂದು ಮಾರಾಟ ಮಾಡಿದರು ಎಂದರೆ ಸಾಕ್ಷಿ ಹೌದು ಆದರೆ ಆಕೆಯ ಮಗನಿಗೆ ಮಾರಾಟ ಮಾಡಿದರು ಎಂದು ನುಡಿಯುತ್ತಾರೆ. ತನ್ನ ಜೀವನಾಂಶ ಮತ್ತು ವೈದ್ಯಕೀಯ ಖರ್ಚುಗಳಿಗಾಗಿ ಗಂಗಮ್ಮ ಅಲಿಯಾಸ್ ಪಾಪಮ್ಮರವರು 2 ಸ್ವತ್ತುಗಳನ್ನು 2 ರಿಂದ 4 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿದರು ಎಂದರೆ ಸಾಕ್ಷಿ ಗಂಗಮ್ಮ ಅಲಿಯಾಸ್ ಪಾಪಮ್ಮರವರಿಗೆ ವೈದ್ಯಕೀಯ ಖರ್ಚುಗಳು ಏನು ಇರಲಿಲ್ಲ ಹಾಗೂ ಆ ಸ್ವತ್ತುಗಳನ್ನು ಪ್ರತಿವಾದಿಗಳಿಗೇ ಸೇರಬೇಕೆಂಬ ಉದ್ದೇಶದಿಂದ ಮೋಸದಿಂದ ಮಾರಿದರು ಎಂದು ನುಡಿಯುತ್ತಾರೆ. ಈ ದಾವೆಯನ್ನು ಹೂಡುವ ಎರಡು ತಿಂಗಳ ಮುಂಚಿತವಾಗಿ ಪತ್ರವನ್ನು ಪಡೆದುಕೊಂಡಾಗ ಸದರಿ ಮೋಸದಿಂದ ಮಾರಾಟ ಮಾಡಿದ ವಿಚಾರವು ನನಗೆ ತಿಳಿಯಿತು. ಸದರಿ ಮಾರಾಟದ ಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ಸದರಿ ಪತ್ರವನ್ನು ನಾನು ಪಡೆದುಕೊಂಡ ಸಮಯದಲ್ಲಿ ನನ್ನ ತಂದೆಯು ಬದುಕಿದ್ದರು. ನಿಮ್ಮ ತಂದೆ ಸದರಿ ಪತ್ರಕ್ಕೆ ಸಂಬಂಧಪಟ್ಟಂತೆ ತಕರಾರನ್ನು ಸಲ್ಲಿಸಿದ್ದಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಆ ಪತ್ರದ ವಿಚಾರ ನನ್ನ ತಂದೆಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ.

ವಿಭಾಗ ಪತ್ರದ 'ಎ' ಮತ್ತು 'ಸಿ' ಷೆಡ್ಯೂಲ್ ಮೂಲಕ ಬಂದ ಸ್ವತ್ತುಗಳನ್ನು ಒಂದನೇ ಪ್ರತಿವಾದಿಯ ತಂದೆಯಾದ ಎಸ್.ಇ ಹನುಮಯ್ಯರವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 1963 ರಲ್ಲಿ ನನ್ನ ತಂದೆಗೆ 18 ವರ್ಷ ವಯಸ್ಸು ತುಂಬಿತ್ತು ಎಂದರೆ ಗೊತ್ತಿಲ್ಲ. 1963 ರಲ್ಲಿ ಶಾರದಮ್ಮರವರಿಗೆ 18 ವರ್ಷ ವಯಸ್ಸು ತುಂಬಿತ್ತು ಎಂದರೆ ಇರಬಹುದು. 1963 ರ ವಿಭಾಗ ಪತ್ರ ಮತ್ತು 1972 ರ ಮರಣ ಶಾಸನ ಪತ್ರ ಸರಿ ಇರುವುದಿಲ್ಲವೆಂದು ನನ್ನ ತಂದೆ ಮತ್ತು ಶಾರದಮ್ಮರವರು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ಒಂದು

ದಾವೆಯನ್ನು ಹೂಡಿದ್ದರು ಎಂದು ನುಡಿಯುತ್ತಾರೆ. ಮಾದನಹಳ್ಳಿಯ ಸರ್ವೆ ನಂ. 206/2 ರ 2 ಎಕರೆ 18 ಗುಂಟೆಯಲ್ಲಿ ಭಾಗ ಬರಬೇಕೆಂದು ನನ್ನ ತಂದೆಯವರು ಸದರಿ ದಾವೆಯನ್ನು ಹೂಡಿದ್ದರು ಸದರಿ ದಾವೆಯ ಸಂಖ್ಯೆ ನನಗೆ ನೆನಪಿಲ್ಲ. ಸದರಿ ದಾವೆಗೆ ಸಂಬಂಧಪಟ್ಟ ಮೇಲ್ಮನವಿಯು ಈಗ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಡೆಯುತ್ತಿದೆ. ಸದರಿ ಮೇಲ್ಮನವಿಯ ಸಂಖ್ಯೆ ನನಗೆ ನೆನಪಿಲ್ಲ. ಸದರಿ ಮೇಲ್ಮನವಿಯು ಇನ್ನೂ ತೀರ್ಮಾನವಾಗಿಲ್ಲ. ಸದರಿ ಮೇಲ್ಮನವಿಯು ಈ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು